ಸಿಬ್ಬಂದಿ ವರ್ಗದವರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಹೆರಿಗೆಗೋಸ್ಕರ ಯಾವುದೇ ರೀತಿಯ ತೊಂದರೆ ಆಗುತ್ತಿಲ್ಲ. ನಾನು ಕೂಡ ಮಾನ್ಯ ಸದಸ್ಯರ ಜೊತೆಯಲ್ಲಿ ಅಲ್ಲಿಗೆ ಹೋಗಿ ಅಲ್ಲಿನ ಸಮಸ್ಯೆಯನ್ನು ನಿವಾರಣೆ ಮಾಡುತ್ತೇವೆ.

ವಿಷಯ: ನಿರ್ಮಲ ಕರ್ನಾಟಕ ಯೋಜನೆ.

225 (1671)

ಶ್ರೀಮತಿ ಬಿ.ಟಿ.ಲಲಿತಾನಾಯಕ್ (ದೇವದುರ್ಗ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಜನರು ಕತ್ತಲಾಗುತ್ತಿದ್ದಂತೆಯೇ ರಸ್ತೆಯ ಬದಿಗಳಲ್ಲಿ ಮಲಮೂತ್ರಕ್ಕಾಗಿ ಕೂರುವ ಪದ್ಧತಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ ನಿರ್ಮಲ ಕರ್ನಾಟಕ ಯೋಜನೆ ಯಶಸ್ವಿಯಾಗದಿರುವ ಕಾರಣ ಬೇರೆ ಯಾವುದಾದರೂ ಯೋಜನೆ ಹಾಕಲಾಗಿದೆಯೇ?

ಇ) ಇದುವರೆವಿಗೂ ನಿರ್ಮಲ ಕರ್ನಾಟಕ ಯೋಜನೆಗಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಈ ಸಮಸ್ಯೆಯು ಸರ್ಕಾರದ ಗಮನಕ್ಕೆ ಬಂದಿದ್ದು, ಇದನ್ನು ತಡೆಗಟ್ಟಿ ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಲ ವಾತಾವರಣವನ್ನು ಕಲ್ಪಿಸಲು ''ನಿರ್ಮಲ ಗ್ರಾಮ ಯೋಜನೆ''ಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ನಿರ್ಮಲ ಗ್ರಾಮ ಯೋಜನೆಯು ಹಂತ ಹಂತವಾಗಿ ಯಶಸ್ವಿಯಾಗುತ್ತಿದ್ದು ಬೇರೆ ಯಾವುದೆ ಯೋಜನೆಯ ಪ್ರಸ್ತಾಪವಿರುವುದಿಲ್ಲ.

ಇ) ನಿರ್ಮಲ ಗ್ರಾಮ ಯೋಜನೆಯಡಿ 2ನೇ ಅಕ್ಟೋಬರ್ 1995ರಿಂದ ಮಾರ್ಚ್ 98ರ ಅಂತ್ಯದವರೆಗೆ ರೂ. 64.55 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಶ್ರೀಮತಿ ಬಿ.ಟಿ.ಲಲಿತಾ ನಾಯಕ್: ಗ್ರಾಮೀಣ ಜನರಿಗೆ ಮಾಡಿರುವಂತಹ ''ನಿರ್ಮಲ ಗ್ರಾಮ ಯೋಜನೆ'' ಯಶಸ್ವಿಯಾಗಿದೆ, ಅನುಷ್ಠಾನಗೊಳಿಸುತ್ತಿದ್ದೇವೆಂದು

ಹೇಳಿದ್ದಾರೆ. ಆದರೆ ನನಗೆ ತಿಳಿದಮಟ್ಟಿಗೆ ಅದು ಯಶಸ್ವಿ ಆಗಿಲ್ಲ. ಆದ ಕಾರಣ, ಜನಗಳದೆ ದೋಷ ಇದೆ ಎಂದು ಹೇಳುತ್ತೇನೆ. ಏಕೆಂದರೆ ಎಲ್ಲೂ ಹೋಗುವುದಕ್ಕೆ ಇಷ್ಟಪಡದೆ, ರಸ್ತೆ ಬದಿಯಲ್ಲಿಯೇ ಹೋಗಬೇಕು ಎನ್ನುವಂತಹ ಆಸಕ್ತಿ ಇದೆ. ಅಂಥ ಪದ್ಧತಿಯನ್ನು ದೂರ ಮಾಡುವುದಕ್ಕೆ ಸರ್ಕಾರ ಏನು ಯೋಜನೆಯನ್ನು ಹಾಕಿಕೊಂಡಿದೆ, ಅದರಲ್ಲಿ ಎರಡ-ಮೂರು ತೊಂದರೆಗಳಿವೆ. ಏನೆಂದರೆ ಮನೆ ಚಿಕ್ಕದಿರುವುದರಿಂದ, ಮನೆಗಳಿಗೆ ಹೊಂದಿಕೊಂಡಂತೆ ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ಆಗುವುದಿಲ್ಲ. ಎರಡನೆಯದಾಗಿ, ಸರ್ಕಾರ ಕೊಡತಕ್ಕಂಥ ಹಣ ಅವರಿಗೆ ಸಾಲುವುದಿಲ್ಲ. ಆದುದರಿಂದ ಸಾಮೂಹಿಕವಾಗಿ, 8-10 ಶೌಚಾಲಯಗಳು ಒಂದೇ ಜಾಗದಲ್ಲಿರುವ ಕಡೆ ಮಾಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಪರಿಶೀಲಿಸುತ್ತೀರಾ? ಅಂಬೇಡ್ಕರ್ ಭವನ, ಗುರುಭವನ, ಇಂಥ ಸರ್ಕಾರಿ ಕಛೇರಿಗಳನ್ನು ಹೈದರಾಬಾದ್ ಕರ್ನಾಟಕದ ಕಡೆ ಕಟ್ಟುತ್ತಾರೆ. ಅಲ್ಲಿ ಶೌಚಾಲಯಗಳನ್ನು ಕಟ್ಟತಕ್ಕಂಥ ಪದ್ಧತಿ ಇಲ್ಲ. ಆದುದರಿಂದ ಕಡ್ಡಾಯವಾಗಿ ಇದನ್ನು ಕಟ್ಟಲೇಬೇಕು ಎನ್ನುವಂಥ ಕಾನೂನನ್ನು ತರುತ್ತೀರಾ? ಅದನ್ನು ಜಾರಿಗೆ ತರದೇ ಇದ್ದರೆ ಯಾರೂ ಕಟ್ಟುವುದಿಲ್ಲ. ಮತ್ತೆ ಇವತ್ತಿನ ದಿವಸ ವಿದ್ಯಾವಂತರು ಕೂಡ ರಸ್ತೆ ಬದಿಯಲ್ಲಿ ಹೋಗುವಂತಹ ರೂಢಿಯನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಅದನ್ನು ತಪ್ಪಿಸಬೇಕಾದರೆ ಏನು ಮಾಡುತ್ತೀರಿ ಎನ್ನತಕ್ಕಂಥದ್ದನ್ನು ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್: ನಿರ್ಮಲ ಗ್ರಾಮ ಯೋಜನೆ ಎನ್ನತಕ್ಕಂಥದ್ದು, ಒಂದು ಹೊಸ ಮಹತ್ವಾಕಾಂಕ್ಷೆ ದೃಷ್ಟಿಯಿಂದ ತಂದಂಥ ಯೋಜನೆ ಆಗಿದೆ. ಇದು ಬಹಳ ಮಟ್ಟಿಗೆ ಯಶಸ್ವಿ ಒಂದು ದೃಷ್ಟಿಯಿಂದ ಆಗಿದೆ, ಆದರೆ ತೃಪ್ತಿಕರವಾಗಿದೆಯೆಂದು ನಾನು ಭಾವಿಸಿಕೊಂಡಿಲ್ಲ. ಹಿಂದೆ ಕೇವಲ 10 ವರ್ಷದಲ್ಲಿ ಒಂದು ಲಕ್ಷ ಶೌಚಾಲಯಗಳು ಆಗಿವೆ. ಕೇವಲ ಎರಡು ವರ್ಷದಲ್ಲಿ, ಅಕ್ಟೋಬರ್ 1995ನೇ ಇಸವಿಯಿಂದ ಇಲ್ಲಿಯವರೆಗೆ 4,467,93 ಶೌಚಾಲಯಗಳು, ನನಗೆ ಬಂದ ಮಾಹಿತಿ ಪ್ರಕಾರ ಸುಮಾರು 64 ಕೋಟಿ 55 ಲಕ್ಷ ರೂಪಾಯಿ ಖರ್ಚು ಮಾಡಿ ನಿರ್ಮಾಣ ಮಾಡಲಾಗಿದೆ. ಆದರೆ ಇನ್ನು ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಅಷ್ಟರಮಟ್ಟಿಗೆ ಅತೃಪ್ತಿಯಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಅದರ ಜೊತೆಗೆ ಮಾನ್ಯ ಶಾಸಕಿಯರು ಹೇಳಿದಂತೆ, ಬಳ್ಳಾರಿ ಜಿಲ್ಲೆಯಲ್ಲಿ ನಿರ್ಮಲ ಕರ್ನಾಟಕ ಯೋಜನೆಯ ಮೌಲ್ಯಮಾಪನ ಅಧ್ಯಯನ ವರದಿಯನ್ನು, ಬಳ್ಳಾರಿ ಜಿಲ್ಲೆಯ, ಹಂಪಿ ವಿಶ್ವವಿದ್ಯಾಲಯದಿಂದ ಪ್ರತ್ಯೇಕವಾದಂಥ ಎವಾಲ್ಯೂವೇಷನ್ ಸ್ಟಡಿಯನ್ನು ಮಾಡಿಸಿದ್ದೇವೆ. ಈ ಅಧ್ಯಯನದ ವರದಿಯಲ್ಲಿ ತಾವು ಹೇಳಿರುವಂತಹ ವಿಷಯಗಳನ್ನು ಹೇಳಿದ್ದಾರೆ. ಜನಗಳಿಗೆ ಆರೋಗ್ಯ ವಿಚಾರದ ಬಗ್ಗೆ ಪ್ರಚಾರ ಮತ್ತು ಆಂದೋಲನವನ್ನೂ ಮಾಡಿಸಿ ಅವರಿಗೆ ಅರಿವನ್ನು ಮೂಡಿಸುವುದರ ಜೊತೆಗೆ ಈ ಸಹಕಾರ ಆಂದೋಲನವನ್ನು ತೆಗೆದುಕೊಳ್ಳಬೇಕಾಗಿತ್ತು, ಆದರೆ ಇಲ್ಲಿ ಸಮಾಜದ

ಆರ್ಥಿಕ ವರ್ಗಗಳಿಗೆ ಕೊಟ್ಟಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚು ಫಲಾನುಭವಿಗಳು ಆಗಿದ್ದಾರೆ. ಆದರೆ ಅದರ ಉಪಯೋಗದ ವಿಚಾರದಲ್ಲಿ ಕಡಿಮೆ ಉಪಯೋಗ ಪಡೆಯುತ್ತಿದ್ದಾರೆ. ಆದರೆ ಬೇರೆ ವರ್ಗದ ಜನರು ಕಡಿಮೆ ಫಲಾನುಭವಿಗಳಾಗಿದ್ದರು ಕೂಡ, 100ಕ್ಕೆ 90ರಷ್ಟು ಶೌಚಾಲಯಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಅವರ ಆರ್ಥಿಕ ಮತ್ತು ಸಾಮಾಜಿಕ ಸ್ತರದ ಮೇಲೆ ಹೋಗುತ್ತದೆ. ಅದರ ಜೊತೆಗೆ ಇದರ ಅರಿವನ್ನು ಮೂಡಿಸುವಂತಹ ಪ್ರಯತ್ನದಲ್ಲಿ ಆಗಿರತಕ್ಕಂಥ, ನಮ್ಮ ಸ್ವಲ್ಪಮಟ್ಟಿನ ವಿಫಲತೆ ಬಗ್ಗೆ ಹೆಚ್ಚು ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಶೇಕಡ 10 ಭಾಗವನ್ನು ಪ್ರಚಾರ ಆಂದೋಳನಕ್ಕಾಗಿ ಕೊಡಬೇಕು ಎನ್ನುವ ಮಾತು ಇದೆ. ಆದ್ದರಿಂದ ನಾವು ಪ್ರಚಾರ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ ಮತ್ತು ಬೇರೆಯವರೂ ಕೂಡ ಸಹಕಾರ ಕೊಟ್ಟರೆ ನಿರ್ಮಲ ಕರ್ನಾಟಕ ಯೋಜನೆ ಸ್ವಲ್ಪಮಟ್ಟಿಗೆ ಯಶಸ್ವಿಯಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ಜನರು ದೂರು ಕೊಟ್ಟಿದ್ದ ಕೆಲವು ಕಡೆ ಹೋಗಿ ನೋಡಿಕೊಂಡು ಬಂದಿದ್ದೇನೆ. ತಾವು ಏನು ಅಂಕಿಅಂಶಗಳನ್ನು ಹೇಳಿದ್ದೀರಿ, ಅಂದರೆ ನಿರ್ಮಲ ಗ್ರಾಮ ಯೋಜನೆಯಡಿ 2ನೇ ಅಕ್ಟೋಬರ್ 1995ರಿಂದ ಮಾರ್ಚ್ 1998ರ ಅಂತ್ಯದವರೆಗೆ ರೂ. 64.55 ಕೋಟಿ ರೂಪಾಯಿಗಳನ್ನು ನಾಲ್ಕು ಲಕ್ಷಕ್ಕೂ ಹೆಚ್ಚು ಶೌಚಾಲಯಗಳಿಗೆ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ನನಗೆ ಅನ್ನಿಸಿದ ಮಟ್ಟಿಗೆ, ಇದರಲ್ಲಿ ಅರ್ಧ ಭಾಗದಷ್ಟು ಶೌಚಾಲಯಗಳು, ಅಲ್ಲಿಗೆ ಹೋದರೆ ಸಿಗುವುದಿಲ್ಲ. ಇದರಲ್ಲಿ ಬಹುತೇಕ ದುರುಪಯೋಗ ಆಗಿದೆ. ನಿರ್ಮಲ ಗ್ರಾಮ ಯೋಜನೆಯಲ್ಲಿ ಇನ್ನೂ ಹೆಚ್ಚು ಕೆಲಸ ಮಾಡಿಸಬೇಕೆಂದು ತಾವು ಕನಸನ್ನು ಇಟ್ಟುಕೊಂಡಿದ್ದೀರಿ, ಅದಕ್ಕೆ ನಾನು ಸ್ವಾಗತ ಮಾಡುತ್ತೇನೆ. ದಯಮಾಡಿ, ಯಾವುದಾದರೂ ನಿಮ್ಮ ಏಜನ್ಸಿಯಿಂದ ತನಿಖೆ ಮಾಡಿಸಿ. ಇಲ್ಲಿ ಆಗಿರತಕ್ಕಂಥ ಕೆಲಸದ ಬಗ್ಗೆ ನಾನು ದಾಖಲೆ ಸಮೇತ ಹೇಳಬಲ್ಲೆ, ಇವತ್ತು ಕೇವಲ 50 ಪರ್ಸೆಂಟ್‌ನಷ್ಟು ಶೌಚಾಲಯಗಳೂ ಆಗಿಲ್ಲ, ಆದರೆ ಅಂಕಿಅಂಶಗಳು ಮಾತ್ರ ನಿಮ್ಮ ದಾಖಲೆಯಲ್ಲಿವೆ. ಇದನ್ನೇನಾದರೂ ತಾವು ನೋಡುತ್ತೀರಾ ಮತ್ತು ಸಾಮೂಹಿಕವಾಗಿ ಶೌಚಾಲಯಗಳನ್ನು ಕಟ್ಟತಕ್ಕಂಥ ವ್ಯವಸ್ಥೆ ಮಾಡಿ, ಅಲ್ಲಿಗೆ ನೀರಿನ ವ್ಯವಸ್ಥೆ ಮಾಡಿದರೆ ಉಪಯೋಗ ಆಗಬಹುದು, ಆದ್ದರಿಂದ ಅದರ ಕಡೆ ಯೋಚನೆ ಮಾಡಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರು ವ್ಯಕ್ತಪಡಿಸಿದ ಆತಂಕ ನನ್ನಲ್ಲಿಯೂ ಕೂಡ ಇತ್ತು. ಅನೇಕ ಸಂದರ್ಭದಲ್ಲಿ ಈ ಅಂಕಿಅಂಶಗಳು ದೊಡ್ಡ ಸುಳ್ಳನ್ನು ಹೇಳುತ್ತವೆ. ''Statistics lie'' ಎನ್ನುವುದೆ ಇದೆ. ಅದು ಬಹಳ ಮಟ್ಟಿಗೆ ಈ ರೀತಿಯಾದಂತಹ, ಪರಿಣಾಮಕಾರಿಯಾಗಿ ಸುಳ್ಳು ಹೇಳುವುದಕ್ಕೆ ಅಂಕಿಅಂಶಗಳನ್ನು ಬಳಸಿಕೊಳ್ಳುತ್ತೇವೆ. ಆದ್ದರಿಂದಲೇ ನಾವು ಬಳ್ಳಾರಿ ಜಿಲ್ಲೆಗೆ ಸೀಮಿತವಾಗಿರುವಂತೆ, ಬಳ್ಳಾರಿ ಜಿಲ್ಲೆಯ

ನಿರ್ಮಲ ಕರ್ನಾಟಕ ಯೋಜನೆಯ ಮೌಲ್ಯಮಾಪನ ಅಧ್ಯಯನ ವರದಿಯನ್ನು ಹಂಪಿ ವಿಶ್ವವಿದ್ಯಾಲಯದ ಒಬ್ಬ ಅಧ್ಯಯನ ನಿರ್ದೇಶಕರ ನೇತೃತ್ವದಲ್ಲಿ ಪ್ರತ್ಯೇಕವಾದಂತಹ ಈ ಅಧ್ಯಯನವನ್ನು ಮಾಡಿಸಿದ್ದೇವೆ. ಆ ವರದಿಯ ಪ್ರಕಾರ, ಇಡೀ 8 ತಾಲ್ಲೂಕಿನಲ್ಲಿ ಅವರು ರ್‍ಯಾಂಡಮ್ ಸ್ಯಾಂಪಲ್ ರೀತಿಯಲ್ಲಿ ಮಾಡಿದಾಗ ಶೇಕಡ 10ರಷ್ಟು ದುರುಪಯೋಗ ಆಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಅದಕ್ಕಿಂತ ಹೆಚ್ಚಾಗಿ ಅವರು ಹೇಳತಕ್ಕಂಥದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇವುಗಳಿಗೆ ಹೆಚ್ಚಾಗಿ ಫಲಾನುಭವಿಗಳನ್ನು ಗುರುತಿಸಿದ್ದೀರಿ, ಆದರೆ ಅವರು ಹೆಚ್ಚಾಗಿ ಸ್ನಾನದ ಮನೆಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆಯೇ ಹೊರತು ಶೌಚಾಲಯಗಳನ್ನಾಗಿ ಮಾಡಿಕೊಂಡಿಲ್ಲ ಎನ್ನುವಂತಹ ಒಂದು ವಾದವನ್ನು ಅವರು ಹೇಳುತ್ತಾರೆ. ಎರಡನೆಯದಾಗಿ ಇದರ ಜೊತೆಗೆ ವ್ಯಾಪಕವಾಗಿ ಒಳ್ಳೆಯ ಗುಣಮಟ್ಟದ ಶೌಚಾಲಯಗಳು ಕೆಲವು ಭಾಗದಲ್ಲಿ ಆಗಿಲ್ಲ ಮತ್ತೆ ಕೆಲವು ಭಾಗದಲ್ಲಿ ಎರಡು ಗುಂಡಿಯನ್ನು ತೆಗೆಯಬೇಕಾದ ಕಡೆ, ಕೇವಲ ಒಂದು ಗುಂಡಿಯನ್ನು ಮಾಡಿದ್ದಾರೆ. ನನ್ನ ಹಡಗಲಿ ತಾಲ್ಲೂಕಿನಲ್ಲಿ, 100 ಶೌಚಾಲಯಗಳಲ್ಲಿ ಗುಂಡಿಗಳೇ ಇಲ್ಲ ಎಂದು ವರದಿಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಕ್ರಮಕೈಗೊಳ್ಳುತ್ತೇವೆಂದು ಹೇಳಿದ್ದೇವೆ. ಬಳ್ಳಾರಿ ಜಿಲ್ಲೆಯಲ್ಲಿ ಆಗಿರುವಂತೆ, ಪ್ರಾಯಶಃ ಕರ್ನಾಟಕದ ಎಲ್ಲಾ ಭಾಗದಲ್ಲಿ ಆಗಿರಬಹುದು, ಆದ್ದರಿಂದ ಇದಕ್ಕೆ ಒಂದು ಪ್ರತ್ಯೇಕವಾದ ಅಧ್ಯಯನ ಮಾಡುತ್ತಾ, ನಮ್ಮ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ರ್‍ಯಾಂಡಮ್ ಆಗಿ ಹೋಗಿ, ಈ ವಿಚಾರದಲ್ಲಿ ತಪಾಸಣೆ ಮಾಡಬೇಕೆಂದು ಹೇಳಿ, ಆಗತಕ್ಕಂಥ ದುರುಪಯೋಗವನ್ನು ತಡೆಗಟ್ಟುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಹೆಣ್ಣುಮಕ್ಕಳ ಶೌಚಾಲಯದ ಬಗ್ಗೆ ನಾನು ಮೊದಲಿನಿಂದಲೂ ನಿರಂತರವಾಗಿ ಚರ್ಚೆಯನ್ನು ಮಾಡುತ್ತಿದ್ದೇನೆ. ಶ್ರೀಮತಿ ಲಲಿತಾ ನಾಯಕ್‌ರವರು ಈ ಪ್ರಶ್ನೆಯಲ್ಲಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ. ನಾನು ಮಾನ್ಯ ಸಚಿವರ ಕಳಕಳಿಯನ್ನು ಅಲ್ಲಗಳೆಯುತ್ತಿಲ್ಲ. ಇವತ್ತಿನ ವಸ್ತುಸ್ಥಿತಿ ಹೇಗಿದೆ ಎಂದರೆ ನಿರ್ಮಲ ಕರ್ನಾಟಕ ಎನ್ನುವ ಕಲ್ಪನೆ ಮತ್ತು ಹೆಸರು, ಎರಡು ಚೆನ್ನಾಗಿದೆ. ಆದರೆ ಇವತ್ತು ನಡೆಯುತ್ತಿರುವ ವ್ಯವಸ್ಥೆ ಆ ಒಂದು ನಿರ್ಮಲ ಕರ್ನಾಟಕ ಶೌಚಾಲಯಗಳು ನಿಜವಾಗಿಯೂ ಶುಚಿತ್ವವಾಗಿಲ್ಲ, ಯಾರೂ ಸಹ ಹೋಗುತ್ತಿಲ್ಲ. ಪ್ರತಿ ಹಳ್ಳಿಗಳಲ್ಲಿ ಹೆಣ್ಣುಮಕ್ಕಳಿಗೆ ಇದೊಂದು ರೀತಿಯ ಶಿಕ್ಷೆ; ಅವರು ಬೇಲಿ ಪಕ್ಕದಲ್ಲಿಯೇ ಹೋಗುವಂತಹ ಪರಿಸ್ಥಿತಿ ಇದೆ. ಸ್ವಾತಂತ್ರ್ಯ ಬಂದು 50 ವರ್ಷವಾದರೂ ಇನ್ನೂ ಅವರಿಗೆ ಪ್ರತಿ ಹಳ್ಳಿಯಲ್ಲಿ ಉತ್ತಮವಾದಂತಹ ಶೌಚಾಲಯ ಕೊಡುವುದರಲ್ಲಿ ನಾವು ವಿಫಲವಾಗಿದ್ದೇವೆ. ನನ್ನ ದೃಷ್ಟಿಯಲ್ಲಿ ಇದು ನಿರ್ಮಲ ಕರ್ನಾಟಕ ಅಲ್ಲ, ಮಲಮೂತ್ರ ಕರ್ನಾಟಕವಾಗಿದೆಯೇ ಹೊರತು ನಿರ್ಮಲ ಕರ್ನಾಟಕವಾಗಿಲ್ಲ. ಸರ್ಕಾರ ಈ ಯೋಜನೆ ಮಾಡಬೇಕೆಂದು ಇದೆ, ಇದಕ್ಕೆ ನನ್ನ

ತಕರಾರು ಏನೂ ಇಲ್ಲ. ಇದಕ್ಕೆ ಮೊದಲು ಸ್ವಚ್ಛ ನೀರಿನ ಕೊರತೆಯನ್ನು ಸರಿಪಡಿಸಿ, ಪ್ರತಿ ಹಳ್ಳಿಯಲ್ಲಿ, ನಾಲ್ಕು ಮೂಲೆಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್: ಅಧ್ಯಕ್ಷರೆ, ನೀರಿನ ಕೊರತೆಯ ಅಂಶ ಕೂಡ ಒಂದಾಗಿರಬಹುದು. ಆದರೆ ಇಲ್ಲಿ ಕುಟುಂಬ ಶೌಚಾಲಯಗಳನ್ನು ಮಾಡುವ ಉದ್ದೇಶ ಕೂಡ ಇದೆ ಆಗಿದೆ. ಸಾಮೂಹಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿದಾಗ ನೀರು ಬಳಕೆಗೆ ಸರಿಯಾದಂಥ ರೀತಿಯಲ್ಲಿ ಲಭ್ಯವಾಗದೆ ಇರತಕ್ಕಂಥ ಸಂದರ್ಭದಲ್ಲಿ ಅದು ದುರ್ನಾತಕ್ಕೆ ಒಳಗಾಗುತ್ತದೆ. ಆ ಸಂದರ್ಭಗಳಲ್ಲಿ ಆ ಶೌಚಾಲಯಗಳನ್ನು ಉಪಯೋಗಿಸತಕ್ಕಂಥದ್ದು ಕಷ್ಟವಾಗುತ್ತದೆ ಎನ್ನುವ ಕಾರಣಕ್ಕಾಗಿ ಕುಟುಂಬ ಶೌಚಾಲಯದ ಪರಿಕಲ್ಪನೆಯನ್ನು ತಂದಿದ್ದೇವೆ. ಕನಿಷ್ಟಪಕ್ಷ ಅವರು ಕುಟುಂಬ ಶೌಚಾಲಯವನ್ನಾದರೂ ಕೂಡ ಸ್ವಚ್ಛವಾಗಿ ಇಟ್ಟುಕೊಳ್ಳುತ್ತಾರೆ ಎನ್ನುವ ಕಾರಣಕ್ಕಾಗಿ. ನಮ್ಮ ಈ ಅಧ್ಯಯನ ಶಿಬಿರದಲ್ಲಿ ಬಂದಿರತಕ್ಕಂಥ ವರದಿಯೂ ಕೂಡ ಆತಂಕಕ್ಕೆ ಅನುಕೂಲವಾದ ರೀತಿಯಲ್ಲಿ ಇದೆ. ಶೇಕಡ 10 ಭಾಗ ಈ ನೀರಿನ ಕೊರತೆಯ ಪ್ರಶ್ನೆ ಅಲ್ಲ ಉಪಯೋಗ ಆಗದೆ ಇರತಕ್ಕಂಥ ರೀತಿಯಲ್ಲಿಯೂ ಇದೆ. 1650 ರೂಪಾಯಿಗಳ ಶೌಚಾಲಯಗಳನ್ನು ರ್‍ಯಾಂಡಮ್ ಆಗಿ ಸರ್ವೆ ಮಾಡಿ ನೋಡಿ ಬಂದಿದ್ದಾರೆ. ಅದಕ್ಕಾಗಿ, ಇದು ಯಶಸ್ವಿಯಾಗುವುದು ಖಂಡಿತ. ಅದು ಯಶಸ್ವಿ ಆಗಿಯೇ ಆಗುತ್ತದೆ. ಎಲ್ಲಿಯಾದರೂ ಒಂದು ಕಡೆ ಇದನ್ನು ಪ್ರಾರಂಭ ಮಾಡಬೇಕು. ದಯಮಾಡಿ ತಾವು ಚದುರಂಗರವರ ವೈಶಾಖ ಕಾದಂಬರಿಯನ್ನು ನೋಡಿ, ಚಾಮರಾಜನಗರ ಮತ್ತು ನಂಜನಗೂಡು ಅಕ್ಕಪಕ್ಕದಲ್ಲಿ ಇರುವಂಥ ಜನರ ರೀತಿಯಲ್ಲಿ ಬಹಳ ಉತ್ತಮವಾಗಿ ಬರೆದಿದ್ದಾರೆ. ತಾವು ಅದನ್ನು ಓದಿದ ಮೇಲೆ ಆದರೂ ತಾವು ಖಂಡಿತವಾಗಿ ನನ್ನ ಜೊತೆಗೆ ಸಹಕರಿಸುತ್ತೀರೆಂದು ತಿಳಿದುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ತಮ್ಮ ಜೊತೆಯಲ್ಲಿ ಸಹಕರಿಸಲಿಲ್ಲವೆಂದು ಅಲ್ಲ. ಹಿಂದೆ ಒಂದು ಇತಿಹಾಸ ನಿರ್ಮಾಣವಾಯಿತು. ಮಲಮೂತ್ರ ಹೊರತಕ್ಕಂಥದ್ದನ್ನು ನಿಲ್ಲಿಸತಕ್ಕಂಥದ್ದನ್ನು ಬಸಲಿಂಗಪ್ಪನವರು ಮಾಡಿದ್ದು ಎಂಬ ಹೆಸರು ಇದೆ. ತಾವು ಈಗ ನಿರ್ಮಲ ಕರ್ನಾಟಕ ಯೋಜನೆ ಇಟ್ಟಿದ್ದೀರಿ. ಇದಕ್ಕೆ ಹಣ ಜಾಸ್ತಿ ಖರ್ಚಾಗುತ್ತದೆ. ಒಂದು ಗುಂಡಿ ಹೊಡೆದು, ಕಲ್ಲು ಸಿಮೆಂಟಿನಿಂದ ಮಾಡತಕ್ಕಂಥದ್ದು ಅಲ್ಲ, ಇದನ್ನು ಬಹಳ ಪ್ರಾಮಾಣಿಕವಾಗಿ, ವಿಶೇಷವಾದ ವ್ಯವಸ್ಥೆಯೊಂದಿಗೆ ಶೌಚಾಲಯವನ್ನು ಕಟ್ಟಬೇಕು. ಹೆಣ್ಣು ಮಕ್ಕಳಿಗೆ ಈಗಾಗಲೇ ತಾವು ಶೇಕಡ 35 ಮೀಸಲಾತಿ ಕೊಡಬೇಕೆಂದು ಮಾಡಿದ್ದೀರಿ, ಕನಿಷ್ಟ ಶೌಚಾಲಯವನ್ನಾದರೂ ಮಾಡಿಕೊಡಿ. ಆಮೇಲೆ ತಾವು ಆ ಮೀಸಲಾತಿ ಪರ್ಸೆಂಟನ್ನು ಶಾಸನ ಸಭೆಗಳಲ್ಲಿ ಮತ್ತು ಲೋಕಸಭೆಗಳಲ್ಲಿ ರಿಸರ್ವ್ ಮಾಡಿದಂತಾಗುತ್ತದೆ. ಇದನ್ನು ನಿಮ್ಮ ಕಾಲದಲ್ಲಿ ಎಷ್ಟೇ ಖರ್ಚಾದರೂ ಮಾಡುತ್ತೇವೆ ಎನ್ನುವ ಒಂದು ದಿಟ್ಟ ನಿಲುವನ್ನು ತಾವು ಪ್ರಕಟ ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಜಿಲ್ಲಾ ಪಂಚಾಯಿತಿ ಸದಸ್ಯರು ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಸದಸ್ಯರು ಈ ಕಾರ್ಯಕ್ರಮದಲ್ಲಿ ನೀಡಿರುವ ಶೌಚಾಲಯವನ್ನು 6 ತಿಂಗಳಲ್ಲಿ ಮಾಡಿ ಮುಗಿಸದಿದ್ದರೆ ಅಂತಹವರ ಸದಸ್ಯತ್ವವನ್ನು ರದ್ದು ಮಾಡುತ್ತೇವೆ ಎನ್ನುವ ಕಾರಣಕ್ಕಾಗಿ ಅದು ಮುಗಿಯುತ್ತಿದೆ. ಎಷ್ಟೋ ಭಾಗಗಳಲ್ಲಿ ಹೆಚ್ಚು ಕಡಿಮೆ ಶೌಚಾಲಯಗಳು ನಿರ್ಮಾಣ ಆಗಿವೆ. ಆದರೆ ತಾವು ಹೇಳಿದಂತೆ 1650 ರೂಪಾಯಿಗಳನ್ನು ಬಡತನ ಸೀಮಾ ರೇಖೆಗಿಂತ ಕಡಿಮೆ ಇರುವ ಜನರಿಗೆ ನಾವು ಕೊಟ್ಟಿದ್ದೇವೆ. ಆ ಹಣ ಕಡಿಮೆಯಾಗಿದೆ ಎನ್ನತಕ್ಕಂಥದ್ದು ಇದೆ. ನಾವು ಅದನ್ನು 2500 ರೂ.ರವರೆಗೆ ಹೆಚ್ಚು ಮಾಡಬೇಕೆನ್ನುವ ಯೋಚನೆ ಇದೆ. ಇದರ ಬಗ್ಗೆ ಸಧ್ಯದಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಇದು ನಿರ್ಮಲ ಕರ್ನಾಟಕ ಯೋಜನೆ ಕೂಡ ಗ್ರಾಮಾಂತರ ಪ್ರದೇಶದ ಜನತೆಯನ್ನು ನಾಗರೀಕರನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ತುಂಬಾ ಒಳ್ಳೆಯದು. ಆದರೆ ಇಲ್ಲಿ ಏನಾಗಿದೆ: ಇದು ನಮಗೂ ತಮಗೂ ಗೊತ್ತಿದೆ. ಹಳ್ಳಿಗಳಲ್ಲಿ ರಾತ್ರಿ ಹೊತ್ತು ಹೊರಟರೆ ನಮ್ಮ ತಾಯಿಯಂದಿರು ಪಟ್ಟನೆ ಎದ್ದು ನಿಂತುಕೊಳ್ಳುತ್ತಾರೆ. ಅದನ್ನು ಕಣ್ಣಿಂದ ನೋಡುವುದಕ್ಕಾಗುವುದಿಲ್ಲ, ಕರುಳು ಕಿತ್ತು ಬರುತ್ತದೆ. ಇದಕ್ಕೋಸ್ಕರ ನಾನು ಸಚಿವರನ್ನು ಕೇಳುವುದು ಇಷ್ಟೆ. ಪ್ರತಿ ಗ್ರಾಮಕ್ಕೆ ಈ ಯೋಜನೆ ಆಗಬೇಕು. ಇದು ಕೆಲವು ಗ್ರಾಮಗಳಲ್ಲಿ ಆಗುತ್ತದೆ. ಇನ್ನೂ ಕೆಲವು ಗ್ರಾಮಗಳಿಗೆ ನಿರ್ಲಕ್ಷ್ಯವಾಗುತ್ತದೆ. ಎಲ್ಲಾ ಹಳ್ಳಿಗಳಿಗೆ ಈ ಯೋಜನೆ ತಲುಪಬೇಕು. ಆ ದಿಕ್ಕಿನಲ್ಲಿ ಏನಾದರೂ ಒಂದು ಹೊಸ ಯೋಜನೆ ಮಾಡಲೇಬೇಕಾಗುತ್ತದೆ. ಇಲ್ಲಿ ನೀವು ಖರ್ಚು ಮಾಡಿದ್ದು ನೋಡಿದರೆ, 2ನೇ ತಾರೀಖು ಅಕ್ಟೋಬರ್ 1998ರಿಂದ 4 ವರ್ಷಕ್ಕೆ 64 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಹಣ ಕೊಟ್ಟಿದ್ದು ನೋಡಿದರೆ ಇದು ಸಾಕಾಗುವುದಿಲ್ಲ. ದಯಮಾಡಿ ಇನ್ನೂ ಹೆಚ್ಚಿನ ಹಣ ಕೊಟ್ಟು ಪ್ರತಿ ಗ್ರಾಮಕ್ಕೂ ಕೂಡ ಈ ಯೋಜನೆ ತಲುಪಬೇಕು. ಈ ಕೂಡಲೇ ಸರ್ಕಾರ ಇದನ್ನು ಯೋಚನೆ ಮಾಡಬೇಕು. ಮತ್ತು ಹಣದ ದುರುಪಯೋಗ, ನೀರಿನ ಸಮಸ್ಯೆ ಇದು ಎಲ್ಲಾ ಪರಿಹಾರ ಮಾಡಬೇಕಾದರೆ ಪ್ರತಿಯೊಂದು ವಿಧಾನಸಭೆಯ ಕ್ಷೇತ್ರಕ್ಕೆ ಒಂದು ಸಮಿತಿ ಮಾಡಬೇಕು. ಯಾವುದೇ ಗ್ರಾಮಾಂತರ ಪ್ರದೇಶದ ಹಳ್ಳಿಗೆ ಹೋದರೂ ಜನ ಕೇಳುತ್ತಾರೆ. ಏನಾದರೂ ಪರಿಹಾರ ಮಾಡುವುದಕ್ಕೆ ಒಂದು ಸಮಿತಿಯನ್ನು ಮಾಡಿ, ಇದಕ್ಕೆ ಶಾಸಕರೇ ಆಗಬೇಕೆಂದು ಇಲ್ಲ. ಅಧಿಕಾರಿಗಳು ಆಗಬಹುದು, ಇದರಿಂದ ಹಣ ದುರುಪಯೋಗವಾಗುವುದನ್ನು ತಪ್ಪಿಸಬಹುದು. ಪ್ರತಿ ಗ್ರಾಮಕ್ಕೂ ಕೂಡ ಈ ಯೋಜನೆ ಮಾಡುವ ಹಾಗೆ ಸರ್ಕಾರ ಯೋಚನೆ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಅರಿವಿನ ಕೊರತೆ ಇದರಲ್ಲಿ ಬಹಳ ಮುಖ್ಯವಾದ

ಅಂಶವಾಗಿದೆ. ಈ ವಿಚಾರವನ್ನು ತೆಗೆದುಹಾಕಲಿಕ್ಕೆ ಯಾವ ಸಂಘ ಸಂಸ್ಥೆಯವರು ಅಂತಹ ಜನರನ್ನು ಕರೆದುಕೊಂಡು ಬಂದರೆ ಅವರಿಗೆ 25 ರೂಪಾಯಿಗಳನ್ನು ಇನ್ಸೆಂಟೀವ್ ಆಗಿ ಕೊಡುತ್ತೇವೆಂದು ಹೇಳಿದರೂ ಕೂಡ ಯಾವ ಸಂಘ ಸಂಸ್ಥೆಯವರೂ ಕೂಡ ಮುಂದೆ ಬರಲಿಲ್ಲ. ಆದರೂ ಕೂಡ ಮಾನ್ಯ ಈಶ್ವರಪ್ಪನವರು ಹೇಳಿದಂತೆ ಸಮಿತಿಯ ಬಗ್ಗೆ ರಾಂಡಮ್ ಆಗಿ ಶೇಕಡ 10 ಭಾಗವನ್ನು ನಿರ್ಮಲ ಕರ್ನಾಟಕ ಯೋಜನೆಯಲ್ಲಿ ಈ ಶೌಚಾಲಯಗಳ ನಿರ್ಮಾಣದಲ್ಲಿ ಆಗಿರುವ ದುರುಪಯೋಗದ ಬಗ್ಗೆ ಕಡ್ಡಾಯವಾಗಿ ವರದಿಯನ್ನು ಸಲ್ಲಿಸಬೇಕೆಂದು ಹೇಳಿ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳಿಗೆ ನಾನು ಸುತ್ತೋಲೆಯನ್ನು ಕಳುಹಿಸಿಕೊಡುತ್ತೇನೆ. ಅವರು ಪರೀಕ್ಷೆ ಮಾಡಿ ತನಿಖೆಗೆ ಒಳಪಡಿಸಬೇಕು. ತಾವು ಹೇಳಿದ್ದನ್ನು ಮತ್ತು ಮಾನ್ಯ ಸದಸ್ಯರಾದ ನಾಗರಾಜರವರು ಪ್ರಸ್ತಾಪ ಮಾಡಿದಂತೆ 1650 ರೂಪಾಯಿಗಳು ಬಹಳ ಕಡಿಮೆ ಇದೆ, ಕೆಲವು ಬಡತನ ಸೀಮಾ ರೇಖೆಗಿಂತ ಕೆಳಗೆ ಇರುವಂತಹವರಿಗೆ ಇದು ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ, ಅದಕ್ಕಾಗಿ 2500 ರೂಪಾಯಿಗಳನ್ನು ಕೊಟ್ಟರೆ ಶೌಚಾಲಯವನ್ನು ಚೆನ್ನಾಗಿ ಕಟ್ಟಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಸನ್ಮಾನ್ಯ ಹಿರಿಯ ಶಾಸಕರಾದ ಶ್ರೀ ಈಶ್ವರಪ್ಪನವರು ಕೊಟ್ಟಂಥ ಸಲಹೆ ಪ್ರಕಾರ, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗಿದೆ. ಅಲ್ಲಿಯ ಜನರ ಸಂಪೂರ್ಣ ಸಹಕಾರ ಇದೆ. ಇಡೀ ರಾಜ್ಯದಲ್ಲಿಯೇ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯವರು ಇದನ್ನು ಉಪಯೋಗಿಸಿಕೊಂಡಿದ್ದಾರೆ. ಆದರೆ ಈ ಯೋಜನೆ ಆಗದೆ ಇರತಕ್ಕಂಥದ್ದು ರಾಯಚೂರು, ಬಳ್ಳಾರಿ, ಬಿಜಾಪುರ, ಗುಲ್ಬರ್ಗಾ, ಬೀದರ್; ಇದಕ್ಕೆ ಪ್ರತಿಕ್ರಿಯೆ ಶೂನ್ಯವಾಗಿದೆ. ಇದಕ್ಕೆ ಅರಿವಿನ ಕೊರತೆ ಮುಖ್ಯ ಎಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಬಹಳ ಮುಖ್ಯವಾಗಿ ಹೇಳಬೇಕೆಂದರೆ: ಈ ಯೋಜನೆ ವಿಶಾಲ ಜಾಗ ಇರತಕ್ಕಂಥ ಸ್ಥಳದಲ್ಲಿ ಫಲಶೃತಿಯಾಗುತ್ತದೆ. ಆದರೆ ನಾವು ಬೀದರ, ಗುಲ್ಬರ್ಗಾ ಜಿಲ್ಲೆಯ ಹಳ್ಳಿಗಳಲ್ಲಿ ನೋಡಿದಾಗ ಮನೆಯಲ್ಲಿ ವಾಸ ಮಾಡತಕ್ಕಂಥದ್ದು ಕಷ್ಟದ ಪರಿಸ್ಥಿತಿ ಇರುವಾಗ, ತಾವು ಸಾಮೂಹಿಕ ಶೌಚಾಲಯಗಳ ಚಿಂತನೆ ಮಾಡುವುದು ಬಹಳ ಒಳ್ಳೆಯದು. ಎರಡನೆಯದು: ಗ್ರಾಮ ಪಂಚಾಯಿತಿ ವತಿಯಿಂದ ಯಾವುದೇ ಮನೆಗೆ ಲೈಸೆನ್ಸ್ ಕೊಡುವಾಗ ಕಡ್ಡಾಯ ಶೌಚಾಲಯ ಇರತಕ್ಕಂಥದ್ದು ಎಂದು ನಿಯಮದೊಳಗೆ ಕೊಟ್ಟರೆ ಸೂಕ್ತ ಎಂದು ನಾನು ಎರಡು ಸಲಹೆಗಳನ್ನು ಸರ್ಕಾರಕ್ಕೆ ಕೊಡುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಹಿಂದೆ ಗ್ರಾಮ ಪಂಚಾಯಿತಿ ಆ್ಯಕ್ಟ್ ತಿದ್ದುಪಡಿ ಬಂದಾಗ ಪಂಚಾಯಿತಿ ಸದಸ್ಯರಿಗೆ ಕಡ್ಡಾಯವಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕೆಂದು ಹೇಳಿದೆ. ಆದರೆ ಇವತ್ತೂ ಕೂಡ ಸನ್ಮಾನ್ಯ ಸಚಿವರು ಹೇಳಿದರು, 6 ತಿಂಗಳೊಳಗೆ ಯಾರು ಶೌಚಾಲಯವನ್ನು ಕಟ್ಟಿಸುವುದಿಲ್ಲ ಅವರ

ಸದಸ್ಯತ್ವವನ್ನು ರದ್ದು ಮಾಡುತ್ತೇವೆಂದು. ಅವತ್ತು ಪೂರ್ಣ ತಿದ್ದುಪಡಿ ಮಾಡತಕ್ಕಂಥ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದೆ, ಅದನ್ನು ಸರ್ಕಾರ ಕೂಡ ಒಪ್ಪಿದೆ. ಸರ್ಕಾರ ಎಲ್ಲಾ ಸೌಲಭ್ಯಗಳನ್ನು ಕೊಟ್ಟು 6 ತಿಂಗಳೊಳಗೆ ಅವರು ಶೌಚಾಲಯವನ್ನು ನಿರ್ಮಾಣ ಮಾಡದೇ ಹೋದರೆ, ಅವರ ಸದಸ್ಯತ್ವವನ್ನು ಅನರ್ಹಗೊಳಿಸಬೇಕೆಂದು ಸರ್ಕಾರದ ತಿದ್ದುಪಡಿ ಆಗತಕ್ಕಂಥ ಸಂದರ್ಭದಲ್ಲಿ ಅದೇರೀತಿ ಆಗಿರತಕ್ಕಂಥದ್ದು. ಆ ರೀತಿಯಾದ ಎಲ್ಲಾ ಸೌಲಭ್ಯಗಳನ್ನು ಸರ್ಕಾರ ಒದಗಿಸಿದೆಯೇ ಎನ್ನತಕ್ಕಂಥದ್ದು ಮೊದಲು ತಿಳಿದುಕೊಂಡು, ಆಮೇಲೆ ಅನರ್ಹಗೊಳಿಸುವಂಥದ್ದು. ಏನೂ ಒದಗಿಸದೆ, ಅವರನ್ನು ಅನರ್ಹಗೊಳಿಸುವುದು ಸರಿಯಲ್ಲ.

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು): ನಿರ್ಮಲ ಕರ್ನಾಟಕ ಯೋಜನೆ ಅಡಿಯಲ್ಲಿ ಮಾರ್ಚಿ ತಿಂಗಳ ಕೊನೆಗೆ ಹಿರೇಕೆರೂರು ತಾಲ್ಲೂಕಿಗೆ ಹಣ ಬಿಡುಗಡೆ ಆಗಿಲ್ಲ. ದಯಮಾಡಿ ಆ ಸಹಾಯಧನವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸದಸ್ಯರ ನಿಜವಾದ ಕಳಕಳಿಯನ್ನು ನಾನು ಅಭಿನಂದಿಸುತ್ತೇನೆ. ಎಲ್ಲಾ ಮಾನ್ಯ ಶಾಸಕ ಮಿತ್ರರಿಗೆ ಹೇಳುತ್ತೇನೆ, ಕಡ್ಡಾಯವಾಗಿ ಮಾಡಬೇಕೆಂದು ಹೇಳುವುದು ನಮ್ಮ ಉದ್ದೇಶ ಮತ್ತು ಸದಿಚ್ಛೆ ವಿನಹಃ ಅವರನ್ನು ಅನರ್ಹಗೊಳಿಸುವಂಥದ್ದು ಏನೂ ಇಲ್ಲ. ಈಗಾಗಲೇ ಶೇಕಡ 75 ಸದಸ್ಯರ ಶೌಚಾಲಯಗಳು ನಿರ್ಮಾಣಗೊಂಡಿವೆ. ಆದರೂ ಕೂಡ 25 ಪರ್ಸೆಂಟ್ ಶೌಚಾಲಯಗಳು ನಿರ್ಮಾಣ ಆಗತಕ್ಕಂಥ ಅಗತ್ಯ ಇದೆ. ನಾವು ಯಾರನ್ನೂ ಇಲ್ಲಿಯವರೆಗೆ ಅನರ್ಹಗೊಳಿಸಿಲ್ಲ. ಅದು ನಮ್ಮ ಉದ್ದೇಶ ಅಲ್ಲ. ಒತ್ತಡ ತಂದಾಗ ಕೆಲಸ ಆಗಬಹುದೆಂದು ನಮ್ಮ ಪ್ರಶ್ನೆ ಅಷ್ಟೆ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ ಅನೇಕ ವಿಷಯಗಳನ್ನು, ಅಲ್ಲಿಯ ಸಮಸ್ಯೆಗಳನ್ನು ನಾವು ಅಧ್ಯಯನದ ಉದ್ದೇಶಗಳನ್ನು ಇದರಲ್ಲಿ ಸೇರಿಸಿದ್ದೇವೆ. ಇದು ಮುಂದೆ ಕೂಡ ಎಲ್ಲರಿಗೂ ಅನ್ವಯಿಸುತ್ತದೆ. ಶೌಚಾಲಯದ ಗ್ರಾಮಮಟ್ಟದ ಮೌಲ್ಯಮಾಪನದ ಮೂಲ ಉದ್ದೇಶ ಹೀಗೆ ಇದೆ. ಫಲಾನುಭವಿ ಕುಟುಂಬದ ಜಾತಿ ವರ್ಗ ಹಾಗೂ ಲಿಂಗ ಸ್ವರೂಪವನ್ನು ಗುರುತಿಸುವುದು. ನಿರ್ಮಾಣಗೊಂಡಿರುವ ಶೌಚಾಲಯಗಳು ನಿಯಮದ ನಮೂನೆಯಲ್ಲಿ ಇದ್ದಾವೆ ಎನ್ನುವುದನ್ನು ಕಂಡುಕೊಳ್ಳುವುದು. ನಿರ್ಮಾಣಗೊಂಡಿರುವ ಶೌಚಾಲಯಗಳು ಉಪಯೋಗಿಸುವಂಥ ಸ್ಥಿತಿಯಲ್ಲಿ ಇದ್ದಾವೆ ಎಂಬುದನ್ನು ಗುರುತಿಸುವುದು. ಗ್ರಾಮೀಣ ಪ್ರದೇಶದಲ್ಲಿ ಯಾವ ವರ್ಗ ಈ ಯೋಜನೆ ಪೂರ್ಣ ಲಾಭವನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದೆ ಎಂಬುದನ್ನು ಕಂಡುಕೊಳ್ಳುವುದು. ಶೌಚಾಲಯಗಳನ್ನು ಗ್ರಾಮ ಮಟ್ಟದ ಅಡಿಯಲ್ಲಿ ಒದಗಿಸಿದ್ದು, ಆ ಸೌಲಭ್ಯಗಳನ್ನು ಗ್ರಾಮಮಟ್ಟದ ಪ್ರದೇಶದ ಕುಟುಂಬಗಳು ಪಡೆದುಕೊಂಡಿವೆಯೇ; ಆ ಸಾಮರ್ಥ್ಯವನ್ನು ಹೊಂದಿವೆಯೇ ಎಂಬುದನ್ನು ಕಂಡುಕೊಳ್ಳುವುದು. ಶೌಚಾಲಯಗಳು ಆಗಿರದೆ ಬೇರೆ

ಉದ್ದೇಶಗಳಿಗೆ ಬಳಕೆಯಾಗುತ್ತದೆ ಎಂಬ ಆಕ್ಷೇಪದ ಹಿನ್ನಲೆಯಲ್ಲಿ ಶೌಚಾಲಯಕ್ಕೆಂದು ನಿರ್ಮಿಸುವ ಕಟ್ಟಡವು ಬೇರೆ ರೀತಿಯಾಗಿ ಯಾವ ಉದ್ದೇಶಗಳಿಗೆ ಬಳಕೆಯಾಗುತ್ತದೆ ಎನ್ನುವುದನ್ನು ಗುರುತಿಸುವುದು. ಶೌಚಾಲಯಗಳ ಬಳಕೆ ಹಾಗೂ ಫಲಾನುಭವಿಗಳ ಕುಟುಂಬಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನ ಮತ್ತು ಜಾತಿ ಸ್ವರೂಪವನ್ನು ನಡೆಸಿ ಏನು ಪರಿಸ್ಥಿತಿ ಇದೆ ಎಂಬುದನ್ನು ಪರಿಶೀಲಿಸುವುದು. ಅಂತಿಮವಾಗಿ ಶೌಚಾಲಯಗಳ ಬಗ್ಗೆ ಫಲಾನುಭವಿಗಳ ಪರಿಕಲ್ಪನೆ ಏನು ಎಂಬುದನ್ನು ಹಾಗೂ ಅವರ ಬದುಕಿನಲ್ಲಿ ಶೌಚಾಲಯಗಳು ಒಂದು ಕ್ರಮಬದ್ಧತೆ ಆಗಿದೆ ಎಂಬುದನ್ನು ಕಂಡುಕೊಳ್ಳುವುದು. ಫಲಾನುಭವಿಗಳ ಅಧ್ಯಯನದಲ್ಲಿ ಅವರ ಸ್ನಾನದ ಮನೆಗಳನ್ನು ಮಾಡಿಕೊಳ್ಳುವುದಕ್ಕೆ ಹೆಚ್ಚು ಆದ್ಯತೆ ಕೊಟ್ಟಿದ್ದಾರೆ. ಸಾಮಾಜಿಕ ಆರ್ಥಿಕ ಕೆಳಸ್ತರದಲ್ಲಿರತಕ್ಕಂಥವರು ಈ ಶೌಚಾಲಯಗಳನ್ನು ತಮ್ಮ ಸ್ನಾನದ ಮನೆಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಆ ಹಿನ್ನಲೆಯಲ್ಲಿ ಬಂದಿರತಕ್ಕಂಥ ಅಧ್ಯಯನ ವರದಿಯ ಪ್ರತಿಗಳನ್ನು ನಾನು ಎಲ್ಲಾ ಶಾಸಕರಿಗೆ ಕಳುಹಿಸಿಕೊಡುತ್ತೇನೆ. ಇದನ್ನು ವ್ಯಾಪಕವಾಗಿ ಕರ್ನಾಟಕದಲ್ಲಿ ಪರಿವರ್ತನೆ ಮಾಡುತ್ತೇವೆ. ಹಣವನ್ನೂ ಕೂಡ ಬಿಡುಗಡೆ ಮಾಡುವ ಕ್ರಮ ಕೈಗೊಳ್ಳುತ್ತೇನೆ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ಸಮಯ ಮುಕ್ತಾಯವಾಯಿತು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಈ ದಿನದ ಲಿಖಿತ ಮೂಲಕ ಉತ್ತರಿಸುವ 16ನೇ ಪ್ರಶ್ನೆಗಳ ಪಟ್ಟಿಯಲ್ಲಿನ ಒಟ್ಟು 74 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ: ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಮಹಿಳೆ ಸಾವು.

943 (1356)

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಸರ್ಕಾರೀ ಆಸ್ಪತ್ರೆಯಲ್ಲಿ ಇತ್ತೀಚೆಗೆ ಹೆರಿಗೆಗಾಗಿ ಬಂದ ಮಹಿಳೆಯರ ಮರಣದ ಬಗ್ಗೆ ಸರ್ಕಾರದವರು ತನಿಖೆ ನಡೆಸಿದ್ದಾರೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಇ) ಮರಣ ಹೊಂದಿದ ಮಹಿಳೆಯ ಕುಟುಂಬಕ್ಕೆ ಪರಿಹಾರ ಕೊಡುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?